ಯಕ್ಷಗಾನ ಛಾಯಾವತರಣ ಹಾಗೂ ಇತರ ಕಿರುಪ್ರಸಂಗಗಳು

ಅಮೃತ ಸೋಮೇಶ್ವರ

ಪ್ರಕಾಶಕರು:
ಕಲಾಗಂಗೋತ್ರಿ ಯಕ್ಷಗಾನ ಅಧ್ಯಯನ ಕೇಂದ್ರ (ರಿ).
ಸೋಮೇಶ್ವರ ಉಚ್ಚಿಲ. ಮಂಗಳೂರು ದ.ಕ. –575023

Scanned with CamScanner

ಯಕ್ಷಗಾನ ಛಾಯಾವತರಣ ಹಾಗೂ ಇತರ ಕಿರುಪ್ರಸಂಗಗಳು

ಅಮೃತ ಸೋಮೇಶ್ವರ

ಪ್ರಕಾಶಕರು:

ಕಲಾಗಂಗೋತ್ರಿ ಯಕ್ಷಗಾನ ಅಧ್ಯಯನ ಕೇಂದ್ರ (ರಿ.)
ಸೋಮೇಶ್ವರ ಉಚ್ಚಿಲ, ಮಂಗಳೂರು ದ.ಕ. 575 023.

Scanned with CamScanner

'Chayavatharana and Other Short Yakshagana Plays'
by **Prof. Amrith Someshwar**
"Olume", Kotekar, Mangalore, D.K. 575 022.
Ph: 0824 - 2467755, 8050125690

Published By
Kalagangothri Yakshagana Adhyayana Kendra (R)
Someshwar Uchil, Mangalore - 575 023.

© Author

Year : 2014

Pages : VI + 130

Price : Rs. 75/-

Cover Page : ***Divakar T.***
Mahalasa Mangalore.

Pages Designed & Printed By :
Krithi Printers
Kotekar, Mangalore - 575022.
Ph: 9845174916

Scanned with CamScanner

ಮುನ್ನುಡಿ

ಕರಾವಳಿ ಕರ್ನಾಟಕದ ಹಿರಿಯ ಸಾಹಿತಿ, ಕನ್ನಡ-ತುಳು ವಿದ್ವಾಂಸ, ಜಾನಪದ ತಜ್ಞ, ಸಂಶೋಧಕ ಎಲ್ಲವೂ ಆಗಿರುವ ಅಮೃತ ಸೋಮೇಶ್ವರರು, ಯಕ್ಷಗಾನ ಕ್ಷೇತ್ರದಲ್ಲೂ ವಿವಿಧ ಆಯಾಮಗಳಲ್ಲಿ ವ್ಯಾಪಕ ಕಾಯಕವನ್ನು ಸಲ್ಲಿಸಿದವರು. ಪುರಾಣಗರ್ಭದಿಂದ ಹಲವು ಕಥೆಗಳನ್ನಾಯ್ದು ಪ್ರಸಂಗಗಳನ್ನು ರಚಿಸಿದ ಅಮೃತರು, ಹಾಗೆ ಮಾಡುವಾಗಲೆಲ್ಲ ಪ್ರತಿಯೊಂದು ಪ್ರಸಂಗದಲ್ಲೂ ಒಂದು ಆಶಯ ಅಥವಾ ಸಂದೇಶ ಇರುವಂತೆ ನೋಡಿಕೊಂಡವರು. ಆ ಕಾರಣದಿಂದಲೇ ಅವರು ರಚಿಸಿದ ಎಲ್ಲಾ ಪ್ರಸಂಗಗಳು ರಂಗದಲ್ಲಿ ಮೆರೆದುದು ಮಾತ್ರವಲ್ಲ, ಇಂದಿಗೂ ಜನಪ್ರಿಯವಾಗಿ ಪ್ರಯೋಗಗೊಳ್ಳುತ್ತಿವೆ.

ತನ್ನೆಲ್ಲ ಕೃತಿಗಳಲ್ಲೂ, ಚಿಂತನೆಗಳಲ್ಲೂ ಸಮಾಜಮುಖಿ ಧೋರಣೆಯನ್ನು ರೂಢಿಸಿಕೊಂಡಿರುವ ಅಮೃತರು ಕಲೆ, ಸಾಹಿತ್ಯ ಮುಂತಾದ ವಿಷಯಗಳಲ್ಲಿ ಮುಕ್ತದೃಷ್ಟಿಯನ್ನು ಇಟ್ಟುಕೊಂಡವರು. ಯಕ್ಷಗಾನ ಕಲಾಮಾಧ್ಯಮದ ಮೂಲಕ ಜನಜಾಗೃತಿಯನ್ನು ಮೂಡಿಸಲು ಸಾಧ್ಯವಿದೆ ಎಂಬುದನ್ನು ಮನಗಂಡು, ಆಧುನಿಕ ಕಾಲದ ಪ್ರಮುಖ ಸಮಸ್ಯೆಗಳಾದ ಪರಿಸರ ಸಂರಕ್ಷಣೆ, ಆರೋಗ್ಯ ರಕ್ಷಣೆ, ಶಿಕ್ಷಣ ಪ್ರಸಾರ ಮುಂತಾದ ಕೆಲವಾರು ವಿಚಾರಗಳ ಬಗ್ಗೆ ಜನರಲ್ಲಿ ಎಚ್ಚರ ಮೂಡಿಸುವ ಮತ್ತು ಆ ಕುರಿತಾದ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ ಪ್ರಸಂಗಗಳನ್ನು ಅವರು ರಚಿಸಿದರು. ಅವರ ಈ ನವೀನ ಪ್ರಸಂಗಗಳು ರಂಗದಲ್ಲಿ ಯಶಸ್ವಿ ಪ್ರದರ್ಶನ ಕಂಡಿವೆ.

ಯಕ್ಷಗಾನಕ್ಕೆ ಪೌರಾಣಿಕ ಕಥೆಗಳ ಹೊರತು ಇತರ ಕಥೆಗಳು ಹೊಂದುವುದಿಲ್ಲ ಎಂಬ ಅಭಿಪ್ರಾಯ ಹೊಂದಿರುವವರು ಕೆಲವರಿದ್ದಾರೆ. ಆದರೆ ಅಮೃತರು ರಚಿಸಿದ ನವೀನ ಪ್ರಸಂಗಗಳ ಕಥಾಹಂದರ, ಪಾತ್ರಗಳು ಮತ್ತು ಸನ್ನಿವೇಶಗಳು ಪೌರಾಣಿಕ ಪ್ರಸಂಗಗಳಲ್ಲಿರುವಂತಹದ್ದೇ ವಿನ್ಯಾಸವನ್ನು ಹೊಂದಿರುವ ಕಾರಣ ಅವುಗಳು ರಂಗಸ್ಥಳದಲ್ಲಿ ಎಲ್ಲೂ ಆಭಾಸಕರವಾಗಿ ತೋರುವುದಿಲ್ಲ. ಪ್ರಸಂಗದ ಕೇವಲ ಓದಿನ ಮೂಲಕವೂ ಈ ಅಂಶವನ್ನು ದೃಢಪಡಿಸಿಕೊಳ್ಳಲು ಸಾಧ್ಯವಿದೆ.

ಅಮೃತಸೋಮೇಶ್ವರರ ನವೀನ ಪ್ರಸಂಗಗಳ ಈ ಸಂಕಲನದಲ್ಲಿ ಜಪಾನೀ ಕಥೆಗಳನ್ನಾಧರಿಸಿದ ಎರಡು ಪ್ರಸಂಗಗಳೂ ಇವೆ. ಅವುಗಳಲ್ಲಿ ಏಕಶೃಂಗಿ ಎಂಬ ಪ್ರಸಂಗವನ್ನು ಬೆಂಗಳೂರಿನಲ್ಲಿ ಜಪಾನೀ ಭಾಷೆ ಕಲಿಯುತ್ತಿರುವ ವಿದ್ಯಾರ್ಥಿಗಳು ಜಪಾನೀ ಭಾಷೆಯಲ್ಲೇ ಆಡಿ ತೋರಿಸಿರುವುದು ಒಂದು ಉಲ್ಲೇಖಾರ್ಹ ವಿಷಯ.

ಅಮೃತ ಸೋಮೇಶ್ವರರ ಯಕ್ಷಗಾನ ಪ್ರಸಂಗಗಳ ಈ ನೂತನ ಸಂಕಲನವು, ಯಕ್ಷಗಾನ ಕಲೆಯ ಹರಹನ್ನು ಇನ್ನಷ್ಟು ವಿಸ್ತರಿಸುವಲ್ಲಿ ಸಹಾಯಕವಾಗಲೆಂದು ಹಾರೈಕೆ.

- ಸದಾಶಿವ. ಕೆ

Scanned with CamScanner

— ಪರಿವಿಡಿ —

1. ಛಾಯಾವತರಣ

2. ಏಕಶೃಂಗಿ

3. ರುಧಿರಮೋಹಿನಿ

4. ನಿಸರ್ಗ ವಿಜಯ

5. ಸತ್ಯನಾಪುರದ ಸಿರಿ

6. ಸಹನಾ ಸಂದೇಶ

7. ಸಪ್ತಮಾತೃಕೆಯರು

8. ಮಹಾದಾನಿ ಬಲೀಂದ್ರ

9. ಅಡ್ಕ ಶ್ರೀ ಭಗವತೀ ಚರಿತೆ

Scanned with CamScanner

ಛಾಯಾವತರಣ ಹಾಗೂ ಇತರ ಕಿರುಪ್ರಸಂಗಗಳು

ಅರಿಕೆ

ಈ ಸಂಕಲನದಲ್ಲಿನ ಯಕ್ಷಗಾನ ರಚನೆಗಳು ಅಸಾಂಪ್ರದಾಯಿಕ ಪ್ರಯೋಗಶೀಲ ಕೃತಿಗಳಾಗಿವೆ. ಯಕ್ಷಗಾನದಂಥ ಸಂಪ್ರದಾಯಶೀಲವೆನಿಸಿದರೂ ಚಲನಶೀಲತೆಯುಳ್ಳ ಕಲೆಗೆ ಭಾಷೆಯ ಹಾಗೂ ಪ್ರದೇಶದ ನಿರ್ಬಂಧವಿಲ್ಲ. ಕಥಾವಸ್ತುವನ್ನು ಬೇರೊಂದು ದೇಶದ ಕಥನರಾಶಿಯಿಂದಲೂ ಸಂಗ್ರಹಿಸಲು ಸಾಧ್ಯವಿದೆ. ಉದಾ: ಇಲ್ಲಿನ 'ಛಾಯಾವತರಣ' ಹಾಗೂ 'ಏಕಶೃಂಗಿ' – ಇವುಗಳು ಜಪಾನ್ ದೇಶದ ಜಾನಪದದಿಂದ ಸ್ವೀಕರಿಸಿದಂಥವುಗಳು. ಇದನ್ನು ಸಾಧ್ಯವಾಗಿಸಿದ ಜಪಾನಿನ ರಂಗತಜ್ಞ ವಿದ್ವಾಂಸ ಪ್ರೊ. ಮೊರಿಜಿರಿ ಅವರಿಗೆ ಕೃತಜ್ಞತೆಗಳು.

'ಛಾಯಾವತರಣ'ದ ಕಥಾವಸ್ತು ಜಗತ್ತಿನ ಜನಪ್ರಿಯ ಪಾನೀಯಗಳಲ್ಲಿ ಒಂದಾದ ಚಹಾವನ್ನು ಸಿದ್ಧಗೊಳಿಸುವ ಚಾ ಸೊಪ್ಪಿನ ಮೂಲವು ಭಾರತ ದೇಶ ಎಂಬುದನ್ನು ಸೂಚಿಸುತ್ತದೆ. ಬೌದ್ಧಧರ್ಮ ಸ್ಥಾಪಕ ಭಗವಾನ್ ಬುದ್ಧನ ಅನುಯಾಯಿಗಳು ಜಪಾನ್, ಚೀನಾ ಮುಂತಾದ ದೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆ ದೇಶದವರಿಗೂ ಭಾರತೀಯರಿಗೂ ಸಹಜವಾಗಿ ಸಾಂಸ್ಕೃತಿಕ ಸಂಬಂಧ ಇದ್ದೇ ಇದೆ. ಇಂಥ ಸಂಬಂಧದ ಒಂದು ಚಿಕ್ಕ ಎಳೆ ಈ 'ಛಾಯಾವತರಣ'.

'ರುಧಿರಮೋಹಿನಿ' ಘೋರಮಾರಕವ್ಯಾಧಿ ಏಡ್ಸ್ ಜಾಗೃತಿಯ ಕುರಿತಾದ ಪ್ರಸಂಗ. ಯಕ್ಷಗಾನದಂಥ ಕಲೆಗೆ ಸಮಾಜ ಜಾಗೃತಿಯ ಕರ್ತವ್ಯವೂ ಇದೆಯೆಂದು ನನ್ನ ಅಭಿಪ್ರಾಯ. ಯಕ್ಷಗಾನದಲ್ಲಿ ರಂಗಪ್ರಯೋಗದ ಅಪೇಕ್ಷೆಯಿಲ್ಲದ ಪ್ರಯೋಗಶೀಲ ಕೃತಿಗಳು ಸಾಕಷ್ಟು ಮೂಡಿವೆ. ಇವುಗಳಲ್ಲಿ ಕೆಲವು 'ಓದುವ ಕೃತಿ'ಗಳಾಗಿಯೂ ಸಲ್ಲುತ್ತವೆ. ಸಾಂದರ್ಭಿಕವಾಗಿ ಆಡಿತೋರಿಸಲಿಕ್ಕೂ ಇವು ತಕ್ಕವು. ವೃತ್ತಿ ರಂಗಭೂಮಿಗೆ ಸಲ್ಲುವ ಸಾಂಪ್ರದಾಯಿಕ ಪ್ರಸಂಗಗಳು ಬೇರೆ. ಇಂಥವುಗಳಲ್ಲಿ ಕೆಲವು ತೀರಾ ಕಿರಿದಾಗಿರಬಹುದು. ಅವುಗಳ ಉದ್ದೇಶ ಮಿತವಾಗಿರುತ್ತದೆ. 'ನಿಸರ್ಗ ವಿಜಯ', 'ಸಹನಾ ಸಂದೇಶ'ಗಳು ಸಮಾಜ ಜಾಗೃತಿಗೆ ಸಂಬಂಧಿಸಿದವುಗಳೇ ಆಗಿವೆ.

ಇಲ್ಲಿನ ಕೆಲವು ಪ್ರಸಂಗಗಳಿಗೆ ಕಥಾಸಾರಾಂಶವನ್ನು ಕೊಡಲಾಗಿದೆ. ಪರಿಚಿತ ವಸ್ತುವಿರುವ ಪ್ರಸಂಗಗಳಿಗೆ ಕಥಾಸಾರಾಂಶ ನೀಡಿಲ್ಲ. ಕಲ್ಪಿತ ಪ್ರಸಂಗಗಳ ವಿಚಾರ ಯಕ್ಷಗಾನ ಚರಿತ್ರೆಗೆ ಹೊಸತಾದುದೇನೂ ಅಲ್ಲವಷ್ಟೆ?

ಇಲ್ಲಿನ ಪ್ರಸಂಗಗಳಲ್ಲಿ 'ಛಾಯಾವತರಣ' ಹಾಗೂ 'ರುಧಿರಮೋಹಿನಿ' ಇವುಗಳನ್ನು 'ಕಲಾಗಂಗೋತ್ರಿ ಯಕ್ಷಗಾನ ಅಧ್ಯಯನ ಕೇಂದ್ರ'ದ ಸದಸ್ಯರು ಪ್ರದರ್ಶಿಸಿದ್ದಾರೆ. ಈ ಪ್ರಸಂಗ ಸಂಚಯವನ್ನು ಅದೇ ಸಂಸ್ಥೆಯವರು ಪ್ರಕಟಿಸಿದ್ದಾರೆ. ಆ ಸಂಸ್ಥೆಗೆ ನಾನು ಋಣಿಯಾಗಿದ್ದೇನೆ. ಇದಕ್ಕೆ ಮುನ್ನುಡಿಯನ್ನು ಬರೆದ ಮಿತ್ರ ಶ್ರೀ ಕೆ. ಸದಾಶಿವ ಇವರಿಗೆ ಹಾರ್ದಿಕ ಕೃತಜ್ಞತೆಗಳು. ವಿಮರ್ಶೆಗೆ ಸದಾ ಸ್ವಾಗತ,

– ಅಮೃತ ಸೋಮೇಶ್ವರ

Scanned with CamScanner

ಯಕ್ಷಗಾನ

ಅಡ್ಕ ಶ್ರೀ ಭಗವತೀ ಚರಿತೆ

Scanned with CamScanner

ಅಡ್ಕ ಶ್ರೀ ಭಗವತೀ ಚರಿತೆ

॥ ಸೌರಾಷ್ಟ್ರ – ತ್ರಿವುಡೆ ॥

ಒಂದು ದಿನ ಕೈಲಾಸ ಧಾಮದೊ ।
ಳಿಂದುಧರ ಪರಿವಾರ ಗಣಗಳ ।
ವೃಂದದೊಡನಿರೆ ಮಘವನಲ್ಲಿಗೆ ಬಂದನಾಗ ॥ ೧ ॥

ಬಂದ ಸುರಪತಿಯನ್ನು ಮನ್ನಿಸು ।
ತೆಂದನೀಶನಿದೇಕೆ ಧಾವಿಸಿ ।
ಬಂದೆ ತವಮುಖವೇತಕೀಪರಿ । ಕಂದಿತಿಂದು ॥ ೨ ॥

॥ ಮಧುಮಾಧವಿ – ಅಷ್ಟತಾಳ ॥

ಮೃಡನೆ ಲಾಲಿಸು ನಮಗಡಸಿದ ವ್ಯಥೆಯ ।
ಕಡು ಖೂಳ ದಾರುಕನಿಂದಾದ ಗತಿಯ ॥
ಜಡಜ ಸಂಭವನಿತ್ತ ವರದೊಂದು ಬಲದಿ ।
ಹೊಡೆದಟ್ಟಿದನು ನಮ್ಮ ಸೋಲಿಸಿ ಧುರದಿ ॥ ೧ ॥

ಲೋಕಕಂಟಕನಾಗಿ ಮೆರೆವನು ಮದದಿ ।
ಶೋಕವ ಕಳೆಯಲುಬೇಕಯ್ಯ ದಯದಿ ॥
ನಾಕೇಂದ್ರನಿಂತೆನೆ ಪರಮೇಶನೆಂದ ।
ವ್ಯಾಕುಲ ತೊಲಗಿಪೆ ಬಲುಶೀಘ್ರದಿಂದ ॥ ೨ ॥

॥ ಭಾಮಿನೀ ॥

ಇಂತು ಸುರಪನ ಬೀಳುಗೊಂಡಾ ।
ಕಂತುಹರ ಸಂತಾಪದಿಂದಲೆ ।
ಚಿಂತಿಸಲು ಕಂಬನಿಯ ಬಿಸಿಬಿಂದುಗಳು ತೊಟ್ಟಿಕ್ಕೆ ॥
ಅಂತರಿಸದಾ ಕ್ಷಣದಿ ಉದ್ಭವ –।
ವಾಂತರಲ್ಲಿಯೆ ಸಪ್ತಕನ್ಯೆಯ –।
ರಂತಕಾಂತಕನಡಿಗೆ ನಮಿಸುತೆ ನಿಂತರೋಜೆಯಲಿ ॥

॥ ಮಾರವಿ – ಏಕತಾಳ ॥

ಏತಕೆ ಜನ್ಮವನಿತ್ತಿರಿ ನಮಗೀ ।
ರೀತಿಯೊಳಿಂದಿನಲಿ ॥
ಏತರ ಕಾರ್ಯವನೆಸಗಲು ಬೇಕದ ।
ಜಾತೆಯರೊಳು ಪೇಳಿ ॥

॥ ಸೌರಾಷ್ಟ್ರ – ತ್ರಿವುಡೆ ॥
ಎಂದು ಮಣಿಯಲು ಜವದಿ ವಿಜಯವ ।
ಪೊಂದಿ ಬನ್ನಿರಿಯೆಂದು ಹರಸಲು ।
ಚಂದದಿಂದಾ ದಿವ್ಯಕನ್ಯೆಯ । ರೊಂದೆ ಮನದಿ ॥

॥ ಕೇತಾರಗೌಳ – ಅಷ್ಟ ॥
ಎನ್ನಯ ಕಣ್ಣೀರಿನ ಬಿಂದುಗಳಲಿ ।
ಜನ್ಮವ ತಳೆದಂಥ ॥
ಕನ್ಯೆಯರಿರ ಲಾಲಿಪುದಾ ದಾರುಕ ।
ನೆನ್ನುವ ದಾನವನು ॥

ನಡುಗಿಪ ತ್ರಿಜಗವನಜನವರಬಲದಿ ।
ತಡೆಯುವರಾರಿಲ್ಲ ॥
ಧಡಿಗ ಮದಾಂಧನ ಅಟ್ಟುಳಿಯನು ನೀ ।
ನಡಗಿಪುದತಿ ಜವದಿ ॥ ೨ ॥

ದಾರುಕ ದಾನವನೀಪರಿ ಧರ್ಮವ ।
ಮೀರುತ ಮದಿಸುವನೆ? ॥
ಗಾರುಗೆಡಿಸಿ ತವಸಂಕಲ್ಪವನೀ ।
ಡೇರಿಸಿ ಬಂದಪೆವು ॥ ೩ ॥

॥ ಸೌರಾಷ್ಟ್ರ – ತ್ರಿವುಡೆ ॥
ದಾರುಕಾಸುರನೊಡನೆ ಹೋರುವ ।
ಧೀರಭಾವದಿ ಮುನ್ನಡೆಯಲಾ ।
ದಾರಿಯಲಿ ಮೈದೋರಿನಿಂದನು । ವೀರಗುಳಿಗ ॥ ೧ ॥

ಆರು ನೀನೆಲೆ ಮಾಯಗಾರನೆ ।
ಕಾರಣಿಕದವನೆಂಬುದರಿತೆವು ।
ಘೋರರೂಪನೆ ನಿಂದೆಯೇತಕೆ । ದಾರಿಯೊಳಗೆ ॥ ೨ ॥

ಕೇಳಿರೈ ನಾರಿಯರೆ ರುದ್ರನ ।
ಊಳಿಗದ ಭಟ ಗುಳಿಗ ನಾನೈ ।
ಏಳುಮಂದಿಗಳೆತ್ತ ಪೊರಟಿರಿ । ಕಾಳಗಕ್ಕೆ ॥ ೩ ॥

Scanned with CamScanner

ಮೂರುಕಣ್ಣಿನ ದೇವನಾ ಕ- ।
ಣ್ಣೀರಿನಿಂದುದಿಸಿದೆವು ಮತ್ತಾ ।
ದಾರುಕನ ವಧೆಗಾಗಿ ಜನಕನು । ಕೋರಿದಂತೆ ॥ ೪ ॥

ಪೊರಟಿಹೆವು ನೀ ಬರುವೆಯಾದಡೆ ।
ಹರುಷದಿಂದಲಿ ಬಹುದು ಬಯಸಿದ ।
ತೆರದೊಳಾಹುತಿ ಗೊಳ್ಳಬಹುದಾ । ಧುರಮುಖದಲಿ ॥ ೫ ॥

ದುಷ್ಟರಕ್ಕಸರಟ್ಟಹಾಸದ ।
ಹುಟ್ಟನಡಗಿಪ ಬಗೆಗೆ ನಾವುಗ - ।
ಳೊಟ್ಟುಗೂಡುತ ನಡೆವುದಾತನ ಪಟ್ಟಣಕ್ಕೆ ॥ ೬ ॥

॥ ವಾರ್ಧಕಾರ್ಧ ॥

ಪೊರಟು ಪರಮೋತ್ಸಾಹದಿಂದ ದಾರುಕಪುರದ ।
ಪೊರೆಗೆ ಬರುವಾಗಲಾ ಭಗವತಿಯು ತನ್ನವರ ।
ಕರೆದೆಂದಳಿಲ್ಲೊಂದು ಚೋದಿಗವ ಕಾಣಿಪೆನು ।
ಖಳನ ವರಬಲವ ಮುರಿಯೆ ॥

॥ ಪುನ್ನಾಗವರಾಳಿ ॥

ಕೊರವಿಯಾದಾಳೆ । ಮಾಯದ ।
ಕೊರವಿಯು ಬಂದಾಳೆ ॥

ಕರಿಯುರಿವೆಯು ತಾ ಧರಿಸುತ ಕಪಟದ ।
ತಿರುಕುಳಿ ಬಂದಳು ಮರುಳನು ಹುಟ್ಟಿಸೆ ॥ ೧ ॥

ಕಾಡಿನ ಮೂಲಿಕೆಯು । ತಂದಿಹೆ ।
ನೋಡಬಹುದು ಗುಣವ ॥
ನಾಡಲಿ ಸಿಗದೀ ಮದ್ದಿನ ಮೈಮೆಯೊ ।
ಛೋಡಬಹುದು ಕಾಡುವ ಪೀಡೆಗಳು ॥ ೨ ॥

ಮಂತ್ರದ ಬಲ್ಮೆಯಿದೆ । ತಾಯಿತ ।
ತಂತ್ರದ ಮೋಡಿಯಿದೆ ॥
ಚಿಂತೆಯ ಹರಿಸುವ ಸಿದ್ಧೌಷಧವಿದೆ ।
ಗೊಂತರಿಯದ ಗುಟ್ಟಿನ ನಾರ್‌ಬೇರಿದೆ ॥ ೩ ॥

ಆವುದೂ ಬೇಡವೆನೆ । ದಯೆಯಿಂ ।
ದೀವುದು ದಾನವನೆ ॥
ಸಾವೆನು ಹಸಿವಿಲಿ ಬಸವಳಿಯುತ್ತಿಹೆ ।
ಕಾವುದು ಹೊಟ್ಟೆಗೆ ಉಣಿಸನ್ನಿತ್ತು ॥

॥ ಸಾಂಗತ್ಯ – ರೂಪಕ ॥
ಭಗವತಿ ತಾನಿಂತು ಮಾಯದ ಕೊರವಿಯ ।
ಬಗೆಯಿಂದ ದಾರುಕಾಸುರನ ॥
ನಗರದ ಬೀದಿಬೀದಿಯೊಳಲೆಯುತ್ತಲಿ ।
ವಿಗಡ ವಿದ್ಯೆಯನು ಕಾಣಿಸುತ ॥ ೧ ॥

ಬಂದಳು ಸಂಧ್ಯಾವಂದನೆಗೈಯುತಿಹ ದಾನ ।
ವೇಂದ್ರನಿರುವ ನದೀತಟಕೆ ।

ನೊಂದು ಬೆಂದಂದದಿ ಹಸಿವೆಯ ನಟಿಸುತ ।
ಲೆಂದಳು ಬಿಕ್ಕಿ ಗೋಗರೆದು ॥ ೨ ॥

ದಾನ ಮಾಡಲು ಬೇಕು ಧರ್ಮಗೈಯಲು ಬೇಕು ।
ದಾನವರರಸನೆ ದಯದಿ ॥
ಕ್ಷೀಣಿಸಿಹುದು ದೇಹವಶನವಿಲ್ಲದೆ ನಿ–।
ತ್ರಾಣವಾಗಿದೆ ಭಿಕ್ಷಾಂದೇಹಿ ॥ ೩ ॥

॥ ಮಧುಮಾಧವಿ – ಅಷ್ಟ ॥
ಬಡವೆಯೆ ಕೇಳಿದೊ ಸಂಧ್ಯೆಯ ಜಪದಿ ।
ತೊಡಗಿರ್ಪೆ ಪೋಗರಮನೆಗೆ ನೀ ಮುದದಿ ॥
ಕೊಡುವಳು ನಿನಗೆ ಬೇಕಾದುದನರಸಿ ।
ನಡೆಬೇಗ ಪಡೆದುಣ್ಣು ನೀ ತೃಪ್ತಿವೆರಸಿ ॥

॥ ಕಾಪಿ – ಅಷ್ಟ ॥
ಭವತಿ ಭಿಕ್ಷಾಂದೇಹಿ ದೇವಿ । ದಾ–।
ನವಪತಿಯಾದೇಶದಲಿ ಬಂದೆನೋವಿ ॥
ಅವರ ಪೂಜಾಗೃಹದಲ್ಲಿ । ಶೋಭಿ ।
ಸುವ ಶಂಖಮಣಿಚಕ್ರಗಳನು ಶೀಘ್ರದಲಿ ॥ ೧ ॥

ನೀಡಬೇಕಂತೆ ಶಂಕಿಸದೆ । ತಡ ।
ಮಾಡದಿರೆನೆ ರಂಭಾಮಣಿ ಶಂಕೆಯಿಂದೆ ॥
ಬೇಡುವ ತಿರುಕುಳಿ ನೀನು । ಇಂಥ ।
ಮೋಡಿನುಡಿಗೆ ಮರುಳಪ್ಪೆನೆ ನಾನು? ॥ ೨ ॥

ಕೊಡುವಂಥ ಸೊತ್ತಲ್ಲ ಕೇಳು । ಮೋಸ ।
ಕೆಡೆಗೊಡಲಾರೆ ಬಂದಂತೆ ನೀ ತೆರಳು ॥
ಪಡೆಯದೆ ಪತಿಸಂಕೇತವನು । ದಾನ ।
ಕೊಡಲಿಂದು ಕಡುಮೂರ್ಖಳಪ್ಪೆನು ನಾನು ॥ ೩ ॥

॥ ಭಾಮಿನೀ ॥
ಕೊರವಿಯೆಂದಳು ದೇವಿ ನಿಮ್ಮಯ ।
ಅರಸನೊಳು ಕೇಳ್ದಿದರ ನಿಜವ –।
ನ್ನರಿತು ನೀಡುವುದೆನಲು ರಂಭಾಮಣಿಯು ರಮಣನನು ।
ಕರೆದು ಹದನವನರುಹೆ ದಾರುಕ–।
ನಿರದೆ ಪೇಳಿದನುಚ್ಚ ಕಂಠದಿ ।
ಕೊರವಿ ಕೇಳ್ದುದ ಕೊಟ್ಟು ಕಳುಹವಳನ್ನು ಶಂಕಿಸದೆ ॥

॥ ಕಾಂಭೋಜಿ – ಜಂಪೆ ॥
ಕೊರವಿ ಪೂಜಾವಸ್ತುಗಳನೊಂದಲಸುರೇಂದ್ರ–।
ನರಮನೆಗೆ ಬಂದು ತಾ ನೋಡೆ ॥
ನಿರತಪೂಜಿಪ ದಿವ್ಯವಸ್ತುಗಳ ಕಾಣದೆಯೆ ।
ಅರಿತನಾಗಿಹ ವಂಚನೆಯನು ॥ ೧ ॥

ಈರೀತಿ ಕಣ್ಕಟ್ಟು ವಿದ್ಯೆಗಳ ತೋರುತ್ತ ।
ಭೂರಿ ವಂಚನೆಗೈದರಕಟಾ ॥
ಆರಾದರವರನೆಲ್ಲಿರ್ದಡೆಯು ಪುಡುಕದಿರ ।
ಲಾರೆ ದಂಡಿಪೆನು ಕೈಯಾರೆ ॥

॥ ಮಾರವಿ – ಏಕ ॥
ಎಲ್ಲಿಗೆ ಒಯ್ವಿರಿ ಶಂಖಚಕ್ರಗಳ ।
ನಿಲ್ಲಿರಿ ಹೆಣ್ಣುಗಳೆ ।
ಸಲ್ಲದ ಮೋಸದ ಕಾರ್ಯವಗೈದಿರಿ ।
ಖುಲ್ಲತೆಯನು ತೋರಿ ॥ ೧ ॥

Scanned with CamScanner

ದುರುಳನೆ ನಿನ್ನಯ ಪಾಪದ ಕುಂಭವು ।
ನೆರೆಯುತ ಬಂದಿಹುದು ॥
ಪರಮದುರಾತ್ಮನೊಳಾ ವರ ವಸ್ತುಗ ।
ಳಿರುವುದೆ ಅನುಚಿತವು ॥ ೨ ॥

ಬಾಲಿಶ ಬುದ್ಧಿಯೊಳಾದ ಪ್ರಮಾದಕೆ ।
ಕಾಲಿಗೆ ಬೀಳಲ್ಕೆ –।
ಬಾಲೆಯರಿರ ದಂಡಿಸದೆಲೆ ನಿಮ್ಮನು ।
ಪಾಲಿಪೆ ಕರುಣೆಯೊಳು ॥ ೩ ॥

॥ ಪಂಚಾಗತಿ – ಮಟ್ಟೆ ॥
ದುರುಳ ಯಾರೆಂದರಿತೆ ನಿನ್ನ ।
ಚರಣಕೆರಗಬೇಕೆ ಪಾಪಿ ।
ಪರಮ ಪಾವನೆಯರು ಸಪ್ತ ಕನ್ನಿಕೆಯರಿಗೆ ।
ನೆರವಿಗೆಂದು ಬಂದ ಗುಳಿಗ ।
ಹರನ ಬಂಟ ನಾನು ನಿನ್ನ ।
ನಿರಿದು ರಣದೊಳೊರಗಿಸುವೆನು । ನಿಮಿಷಮಾತ್ರದಿ ॥ ೧ ॥

ಭೂತ ಕೇಳೊ ಬಡಿವಾರದ ।
ಮಾತು ಸಾಕೊ ನಿನ್ನ ಶೌರ್ಯ ।
ವೇತರದೆಂದಾನು ನೋಳ್ಪೆ । ನೀತತೂಕ್ಷಣ ॥
ಆತುಕೊಳ್ಳೆನುತ್ತ ಛಲದಿ ।
ಘಾತಿಸಲ್ಕೆ ಗುಳಿಗ ಬಳಲೆ ।
ದೂತನನ್ನು ಬದಿಗೆ ಸರಿಸಿ ದೇವಿ ನಿಂದಳು ॥

॥ ಸೌರಾಷ್ಟ್ರ – ತ್ರಿವುಡೆ ॥
ದಾರುಕನೆ ಕೇಳೆಲವೊ ಬಲುಮದ ।
ವೇರಿ ಧರ್ಮವ ಮೀರಿ ತನಗಿದಿ ।
ರಾರೆನುತ ಭಂಗಿಸಿದೆ ಸುಜನರ । ಕ್ರೂರತನದಿ ॥ ೧ ॥

ನಾರಿ ಕೇಳೆಲೆ ಭೂರಿ ಪೌರುಷ ।
ದೋರಿ ಶ್ರೇಯಸಿನೇರುಗದ್ದಿಗೆ ।
ಯೇರಿದೆನು ನಿನ್ನಂತೆ ಕಳವಿನ । ದಾರಿಯಲ್ಲ ॥ ೨ ॥

Scanned with CamScanner

ನಿನ್ನ ವರಬಲವನ್ನು ಭಂಗಿಸ ।
ಲೆನ್ನುತಪಹರಿಸಿದೆನು ನಿನ್ನಯ ।
ಘನ್ನ ಶೌರ್ಯವು ಮೆರೆಯಲರಿಯದು । ಇನ್ನು ರಣದಿ ॥ ೩ ॥

ತರಳೆಯರು ಎಂದೆಂಬ ಕರುಣೆಯ ।
ತೊರೆದು ನಿಮ್ಮನು ತರಿದು ಪೂಜಾ ।
ಪರಿಕರವ ವಶಗೈವೆ ಕಪಟವ । ಮುರಿಯುತೀಗ ॥ ೪ ॥

ನೆರೆದುದಾಯುಷ್ಯದ ಘಟವು ಯೆಂ-।
ದುವರಣಿಸಿ ಭಗವತಿಯು ಖಳನನು ।
ಇರಿದು ಕೆಡಹಲು ಸುಮದ ಸರಿಯನು । ಸುರಿಯೆ ಸುರರು ॥ ೫ ॥

॥ ವಾರ್ಧಕ ॥
ಬಳಿಕಲಾ ಸಪ್ತದುರ್ಗೆಯರಂದು ಪರಶಿವನ ।
ಬಳಿಗೈದಿ ವಿವರವನ್ನೊರೆಯೆ ಹರ್ಷವನಾಂತು ।
ಬಲು ಸಾಹಸದ ಕಾರ್ಯವೆಸಗಿ ಬಳಲಿದಿರೀಗ ।
ಲೋಕಕ್ಕೆ ಒಳ್ಳಿತಾಯ್ತು ॥

ನೆಲಸಿ ಭೂತಳದಿ ಪೂಜೆಯಗೊಂಡು ಭಕ್ತರನು ।
ಸಲಹುವುದು ಎನಲಪ್ಪಣೆಯನು ಶಿರಸಾವಹಿಸಿ ।
ಜಲಧಿಯಲಿ ಪಯಣಿಸಲು ಶ್ರೀಗಂಧ ತರುವಿನಿಂ ।
ನೌಕೆಯನು ಬಯಸಲಾಗ ॥

॥ ಸಾಂಗತ್ಯ – ರೂಪಕ ॥
ಹಿಮಗಿರಿ ತಪ್ಪಲೊಳಿರ್ದ ಶ್ರೀಗಂಧದ ।
ದ್ರುಮದಿಂದ ಶಿಲ್ಪಿಯು ಜವದಿ ॥
ರಮಣೀಯ ನೌಕೆಯ ನಿರ್ಮಿಸುತೂರೂರ ।
ಗಮಿಸಿದರಂದು ಲೀಲೆಯಲಿ ॥ ೧ ॥

ಬರಬರುತಲಿ ಬೈರಾಪುರ ಕ್ಷೇತ್ರ ಸನಿಹದಿ ।
ವರ ನೌಕೆ ಸಾಗುತಲಿರಲು ॥
ಗುರುವೀರಾಂಕಿತನೆಂಬೋರ್ವ ವಿಪ್ರನು ।
ನೆರಹುತ್ತೈನೂರು ಶಿಷ್ಯರನು ॥ ೨ ॥

Scanned with CamScanner

ಬೋಧಿಸುತಿರೆ ಬಿಲ್ಲುವಿದ್ಯೆಯ ಸಾತ್ವಿಕ ।
ಸಾಧಕ ವೀರನ ಕಂಡು ॥
ಆ ದಿವ್ಯ ದುರ್ಗೆಯರೆಣಿಸಿದರಾತನ ।
ಸಾದರದಿಂ ಕರೆದೊಯ್ಯೆ ॥ ೪ ॥

ಇಳಿಯುತ ನೌಕೆಯ ಭಗವತಿ ವೀರನ ।
ಬಳಿಗೈದಿ ತಮ್ಮಾಶಯವನು ॥
ತಿಳುಹಿ ತಮ್ಮೊಂದಿಗೈತರೆ ಸ್ಥಾನಮಾನವ ।
ನೊಲಿದೀವೆವತಿ ಗೌರವದೊಳು ॥ ೫ ॥

॥ ಬೇಗಡೆ – ತ್ರಿವುಡೆ ॥
ಎಂದ ದೇವಿಯ ನುಡಿಯನೊಡಬಡುತ ।
ಆ ವೀರಗುರುವರ ।
ಗಂಧನೌಕೆಗೆ ಬಂದ ತೋಷಿಸುತ ॥
ಮುಂದೆ ಗುಳಿಗನು ಕರ್ಣಧಾರನು ।
ಎಂದೆನಿಸಿ ಬಹುದೂರ ನಾವೆಯ ।
ಚಂದದಲಿ ಮುನ್ನಡೆಸಿ ಚೆಲುವಿನ ।
ದೊಂದು ತಾಣದಿ ಸನಿಹ ಕೈತರೆ ॥ ೧ ॥

ಸೋಮನಾಥೇಶ್ವರನು ನೆಲಸಿರ್ದ ।
ಸೋಮೇಶ್ವರದ ವರ ।
ಧಾಮವೀಕ್ಷಿಸಿ ತಾವು ಪಯಣಿಸಿದ ।
ಆ ಮಹಾ ನೌಕೆಯನಿಳಿದು ಶ್ರೀ ।
ಸ್ವಾಮಿಯನು ನೆನೆಯುತ್ತ ಪಡುವಣ ।
ಭೂಮಗೋಪುರವಡರಿ ಬಂದತಿ ।
ನೇಮದಲಿ ಸಮ್ಮುಖದಿ ನಿಂದರು ॥ ೨ ॥

॥ ಕಂದ ॥
ಸುಲಲಿತ ಪಾವನ ಕ್ಷೇತ್ರದಿ ।
ನೆಲಸುವಪೇಕ್ಷೆಯೊಳು ದೇವಿಯರ್ಕಳ್ ಶಿವನಂ ॥
ಒಲಿಪುದು ವಿಹಿತವದೆನುತಂ ।
ಬಲುಭಕ್ತಿಯ ಭಾವದಿಂದೆ ಭಜಿಸಿದರಾಗಳ್ ॥

॥ ಕಾಂಭೋಜಿ – ಜಂಪೆ ॥

ಹನ್ನೆರಡು ವತ್ಸರದಿ ದೇವಿಯರು ಭಜಿಸಿದರು ।
ಮನ್ನಿಸದೆ ಸೋಮೇಶ ತಾನು ॥
ತಣ್ಣಗಿರಲಿನ್ನು ತಮ್ಮಯ ದಿವ್ಯ ಮಹಿಮಾಂಶ ।
ವನ್ನು ಪ್ರಕಟಿಸಬೇಕೆನುತ್ತ ॥ ೧ ॥

ತಮ್ಮಯ ತಪೋಜ್ವಾಲೆ ಪಸರಿಸಲು ದೇವರಿಗೆ ।
ನೆಮ್ಮದಿಯು ನಷ್ಟವಾಗಲ್ಕೆ ।
ಬಿಮ್ಮಗಿಹ ಸ್ವಾಮಿ ಮೌನವನು ಮುರಿದು ಬಾಯ್ತೆರೆದು ।
ನಿಮ್ಮಿಚ್ಛೆಯೇನೆಂದು ಬೆಸಸೆ ॥

॥ ಸುರುಟಿ – ಏಕತಾಳ ॥

ಸ್ವಾಮಿ ಸೋಮನಾಥ । ಪುನೀತಾ ।
ಕಾಮಿತ ವರದಾತ ॥
ಈ ಮಹಾಕ್ಷೇತ್ರದೊಳೆಮಗೆ ನೆಲಸೆ ನೀ ।
ನೇಮವನಿತ್ತಡೆ ನಾವು ಕೃತಾರ್ಥರು ॥ ೧ ॥

ಅದಕೆಂದನು ಒಲಿದು । ಮುಂಭಾ ।
ಗದಿ ನೀವಿರಲಹುದು ॥
ಮುದದಲಿ ನಿತ್ಯಾರ್ಚನೆ, ನೈವೇದ್ಯದ ।
ಹದನವ ಕಲ್ಪಿಸುವೆನು ಸನ್ನಿಧಿಯೊಳು ॥ ೨ ॥

॥ ಸಾಂಗತ್ಯ – ರೂಪಕ ॥

ಆ ಸುಪ್ರಸನ್ನ ಸದಾಶಿವನಾಕಾಶ ।
ಭಾಷಿತದಿಂದ ದುರ್ಗೆಯರು ॥
ತೋಷವಡೆದು ಪಂಚ ದುರ್ಗಾಭಿದಾನದೊ ।
ಳಾ ಸುಕ್ಷೇತ್ರದಿ ನೆಲಸಿದರು ॥

॥ ವಾರ್ಧಕ ॥

ಬಳಿಕ ಕಾಲಾಂತರದಿ ಸೋಮೇಶ್ವರದ ಬಳಿಯ ।
ಸ್ಥಳವಡ್ಡವೆಂಬಲ್ಲಿ ಬೋವಕುಲ ಜಾತೆಯರು ।
ನೆಲಸಿರ್ದರಮಲ ಗುಣ ಭರಿತೆಯರು ಯಮಳೆಯರು ।

ಕೋಡಿಬೀರುಗಳೆಂಬರು ॥
ಬಲುಭಕ್ತೆಯರು ಒಮ್ಮೆ ಉದ್ಯಾವರಕ್ಷೇತ್ರ ।
ದೊಳು ನಡೆವ ಭಗವತೀ ದೇವಿಯುತ್ಸವಕ್ಕೈದೆ ।
ಸಲುವ ಮನ್ನಣೆ ಸಿಗದೆ ನೊಂದು ಬಂದರು ದೇವಿ–
ಯನ್ನೆ ನೆನೆಯುತ್ತೆ ಮನದಿ ॥

॥ ಸಾಂಗತ್ಯ – ರೂಪಕ ॥
ಆರಾಧಿಸಲುಬೇಕು ಶ್ರೀಭಗವತಿಯ ತ–।
ಮ್ಮೂರಲೆನುತ ಯಮಳೆಯರು ॥
ಸಾರತರವ್ರತ ನೇಮ ನಿಷ್ಠೆಯೊಳಿದ್ದು ।
ಭೂರಿ ಭಕ್ತಿಲಿ ಭಜಿಸಿದರು ॥ ೧ ॥

ಆ ಭಕ್ತೆಯರ ಭಕ್ತಿ ಭಾವಕೆ ಮೆಚ್ಚುತ ।
ಶ್ರೀ ಭಗವತಿ ಬಂದು ನೆಲಸಿ ॥
ಆ ಬೋವ ಕುಲಜರ್ಗೆ ಆರಾಧ್ಯಳಾದಳು ।
ಶೋಭಿಸುವಡ್ಕದಿ ಬಳಿಕ ॥ ೨ ॥

॥ ಕೇತಾರಗೌಳ – ಅಷ್ಟ ॥
ಮೊದಲೊಳು ಬೆಲ್ಮಾತ್‌ಮೋಯವೆನ್ನುವ ಕುಟುಂ–।
ಬದ ಸೇವೆ ಕೈಕೊಳ್ಳುತ ॥
ತದನಂತರದಿ ಸರ್ವ ಬೋವ ಸಮಾಜದ ।
ಅಧಿದೇವಿ ತಾನೆನಿಸೆ ॥ ೧ ॥

ಜರಗಲು ಕಾಲಕಾಲಕೆ ಉತ್ಸವಾದಿಗಳ್ ।
ಮೆರೆದುದಡ್ಕಕ್ಷೇತ್ರವು ॥
ವರಪ್ರದೆ ಭಗವತಿ ಪರಿವಾರ ಸಹಿತಲೆ ।
ಪೊರೆಯುತಿರ್ದಳು ಭಕ್ತರ ॥ ೨ ॥

॥ ಭಾಮಿನೀ ॥
ಮೆರೆಯುತಿಹ ಉಳ್ಳಾಲವೆಂಬಾ ।
ಪುರದಿ ಚೌಟಾನ್ವಯ ವಿಭೂಷಿತೆ ।
ಪರಮ ಸಾಹಸಿ ಶೌರ್ಯನಿಧಿಯಬ್ಬಕ್ಕ ಮಹಾರಾಣಿ ॥
ಶರಧಿ ಯುದ್ಧದಿ ಮಲೆತ ರಿಪುಗಳ ।
ನೊರಸಿ ಉರುತರ ಕೀರ್ತಿಗೌರವ ।
ವೆರಸಿ ಸೀಮೆಯನಾಳುತಿರ್ದಳು ಬಹಳ ವಿಭವದಲಿ ॥

Scanned with CamScanner

॥ ಕೇತಾರಗೌಳ - ಅಷ್ಟ ॥

ಅರಮನೆಯೊಳಿಗವನುಗ್ಗೆಯುತಿರುವ ಬೋ-।
ವರ ಕ್ಷೇತ್ರವಡ್ಡದಲಿ ॥
ಜರಗುವ ಭಗವತಿಯುತ್ಸವ ವಿವರವ ।
ನರಿತು ಕುತೂಹಲದಿ ॥ ೧ ॥

ಪರಿಚಾರಕನ ಕರೆದೆಂದಳು ಕೊಡುವೆ ನಾ
ಬಿರುದಿನ ಉತ್ಸವವ ॥
ಅರಮನೆಯಂಗಳದಲ್ಲಿ ಕೆಂಡದ ಸೇವೆ ।
ಪರಿಗ್ರಹಿಸಲಿ ದೇವಿಯು ॥ ೨ ॥

ಪರಿಚಾರಕರು ರಾಣಿಯಾಜ್ಞೆಯನಡ್ಡದ ।
ಗುರಿಕಾರರಿಂಗರುಹೆ ।
ಅರಸಿಯಾಣತಿಯನ್ನು ಶಿರಸಾವಹಿಸಿ ಪರಿ ।
ಕರವ ಯೋಜಿಸಿದರಂದು ॥ ೩ ॥

॥ ಸೌರಾಷ್ಟ್ರ - ತ್ರಿವುಡೆ ॥

ದಿಟ್ಟೆ ರಾಣಿ ವಿನೋದವೀಕ್ಷಿಸೆ ।
ಗುಟ್ಟಿನಲಿ ಬಾವಿಯನು ತೋಡಿಸಿ ।
ಒಟ್ಟಯಿಸಿದಳು ಕೆಂಡಸೇವೆಗೆ ಕಟ್ಟಿಗೆಯನು ॥ ೧ ॥

ಜರಗಿತುತ್ಸವ ಭೂರಿ ತೋಷದಿ ।
ಅರಸಿಯೋರಗೆಯವರೊಡನೆ ಉ-।
ಪ್ಪರಿಗೆಯಲಿ ಕುಳ್ಳಿರ್ದಳೆಲ್ಲವ । ನಿರುಕಿಸುತ್ತ ॥ ೨ ॥

ಕೆಂಡ ಸೇವೆಯ ವೇಳೆ ಬರೆ ಚಾ ।
ಮುಂಡಿ ಪಾತ್ರಿಯು ಉರಿಯುವಗ್ನಿಯ ।
ಕುಂಡ ಮಧ್ಯಕೆ ಜಿಗಿದನಮಮ ಪ್ರ । ಚಂಡತೆಯಲಿ ॥ ೩ ॥

ಕಾಣದಾಗಲು ಹಾರಿದಾತನು ।
ರಾಣಿಗಹಗಹಿಸುತ್ತ ಛೇ ಛೇ ।
ಪ್ರಾಣತೆತ್ತನು ಚೆಲುವ ತರುಣನು । ಜ್ಞಾನವಿರದೆ ॥ ೪ ॥

Scanned with CamScanner

ನುಡಿದು ನಗಲಾ ಕೆಂಡರಾಶಿಯ ।
ನೊಡೆದು ಮೇಲಕೆ ಜಿಗಿದು ದೇವಿಯು ।
ಒಡನೆ ಕೆಂಡವ ಸಿಡಿಸೆ ಮೇಲಕೆ । ಘುಡುಘುಡಿಸುತ ॥ ೫ ॥

॥ ಭಾಮಿನೀ ॥
ಬೆರಗುವಡೆದಿರಲೊಡನೆ ರಾಣಿಯ ।
ಸೆರಗಿನೊಳು ಬೀಳಲ್ಕೆ ಕೆಂಡದ
ಸರಿಯು ಮೇಲ್ವಾಯಲ್ಕೆ ಜ್ವಾಲೆಯು ಉಲ್ಬಣಿಸಿತಾಗ ॥
ಬರಿದೆ ಪರಿಹಾಸಕ್ಕೆಳಸುತೀ ।
ಪರಿಯ ಪರಿಭವವಾಯ್ತಲಾಯೆಂ ।
ದರಸಿ ತನ್ನಯ ತಪ್ಪನರಿಯುತ ಪರಿತಪಿಸುತಿರದೆ ॥

॥ ಸಾಂಗತ್ಯ – ರೂಪಕ ॥
ಪರಮ ಪಶ್ಚಾತ್ತಾಪದಿಂದಲಭಯ ದೇವಿ ।
ಉರುತರ ಭಕ್ತಿ ಭಾವದೊಳು ॥
ವರದೆ ಶ್ರೀ ಭಗವತಿ ದೇವಿಯೆ ಗತಿಯೆಂದು ।
ಶರಣಾಗೆ ಶಮನವಾಯ್ತುರಿಯು ॥

ಭಗವತಿ ದೇವಿಯ ಭಜಕರ ಕರೆಸುತ್ತ ।
ನಗನಾಣ್ಯ ಭೂಮಿಕಾಣಿಕೆಯ ।
ಬಗೆ ಬಗೆ ಉಂಬಳಿ ಉತ್ತಾರವಿತ್ತಳು ।
ಪೊಗಳುತ ದೇವೀಮಹಿಮೆಯ ॥

॥ ಮೋಹನ – ತ್ರಿವುಡೆ ॥
ಮಂಗಲಂ ಶಿವನೇತ್ರವಾರಿಯೊಳುದಿಸಿದಾ ದಿವ್ಯಾತ್ಮೆಗೆ ।
ಮಂಗಲಂ ದಾರುಕಮಥಿನಿ ಮಾಯಾ ಕಲಾಪಿನಿ ದುರ್ಗೆಗೆ ।
ಮಂಗಲಂ ವರ ಭಕ್ತವತ್ಸಲೆ ನಿತ್ಯ ನಿರ್ಮಲೆ ಮಾತೆಗೆ ।
ಮಂಗಲಂ ಸೋಮೇಶ ತೋಷೆಗೆ ಅಡ್ಕಕ್ಷೇತ್ರನಿವಾಸೆಗೆ ॥

****

Scanned with CamScanner

ಕಲಾಗಂಗೋತ್ರಿ ಪ್ರಕಟಿಸಿದ ಗ್ರಂಥಗಳು

* ಸಹಸ್ರ ಕವಚ ಮೋಕ್ಷ
* ಸಿರಿ
* ನಳಿನಾಕ್ಷ ನಂದಿನಿ
* ಕವಿಭೂಷಣ
* ಯಕ್ಷ ವಂದನಾ
* ಯಕ್ಷಾಂದೋಳ
* ಯಕ್ಷಗಾನ ನಡೆದು ಬಂದ ದಾರಿ
* ಅಕ್ಷರ ವಿಮೋಚನೆ
* ವಜ್ರ ಕುಸುಮ
* ಮಾನಿಷಾದ
* ಪಂಪ ರಾಮಾಯಣ
* ಮಕ್ಕಳ ಯಕ್ಷಗಾನ ಪ್ರಸಂಗಗಳು – ಕಾರ್ಯಾಗಾರ
* ಮಹಿಳಾ ಯಕ್ಷಗಾನ
* ಕುಡಿಯನ ಕಣ್ಣ್
* ಯಕ್ಷಗಂಗೋತ್ರಿ
* ಛಾಯಾವತರಣ ಮತ್ತು ಇತರ ಕಿರು ಯಕ್ಷಗಾನ ಪ್ರಸಂಗಗಳು

Scanned with CamScanner

ಅಮೃತ ಸೋಮೇಶ್ವರ

ತನ್ನೆಲ್ಲ ಕೃತಿಗಳಲ್ಲೂ, ಚಿಂತನೆಗಳಲ್ಲೂ ಸಮಾಜಮುಖಿ ಧೋರಣೆಯನ್ನು ರೂಢಿಸಿ ಕೊಂಡಿರುವ ಅಮೃತರು ಕಲೆ, ಸಾಹಿತ್ಯ ಮುಂತಾದ ವಿಷಯಗಳಲ್ಲಿ ಮುಕ್ತದೃಷ್ಟಿಯನ್ನು ಇಟ್ಟುಕೊಂಡವರು. ಯಕ್ಷಗಾನ ಕಲಾ ಮಾಧ್ಯಮದ ಮೂಲಕ ಜನಜಾಗೃತಿಯನ್ನು ಮೂಡಿಸಲು ಸಾಧ್ಯವಿದೆ ಎಂಬುದನ್ನು ಮನಗಂಡು, ಆಧುನಿಕ ಕಾಲದ ಪ್ರಮುಖ ಸಮಸ್ಯೆಗಳಾದ ಪರಿಸರ ಸಂರಕ್ಷಣೆ, ಆರೋಗ್ಯ ರಕ್ಷಣೆ, ಶಿಕ್ಷಣ ಪ್ರಸಾರ ಮುಂತಾದ ಕೆಲವಾರು ವಿಚಾರಗಳ ಬಗ್ಗೆ ಜನರಲ್ಲಿ ಎಚ್ಚರ ಮೂಡಿಸುವ ಮತ್ತು ಆ ಕುರಿತಾದ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ ಪ್ರಸಂಗಗಳನ್ನು ಅವರು ರಚಿಸಿದರು.

ಯಕ್ಷಗಾನಕ್ಕೆ ಪೌರಾಣಿಕ ಕಥೆಗಳ ಹೊರತು ಇತರ ಕಥೆಗಳು ಹೊಂದುವುದಿಲ್ಲ ಎಂಬ ಅಭಿಪ್ರಾಯ ಹೊಂದಿರುವವರು ಕೆಲವರಿದ್ದಾರೆ. ಆದರೆ ಅಮೃತರು ರಚಿಸಿದ ನವೀನ ಪ್ರಸಂಗಗಳ ಕಥಾಹಂದರ, ಪಾತ್ರಗಳು ಮತ್ತು ಸನ್ನಿವೇಶಗಳು ಪೌರಾಣಿಕ ಪ್ರಸಂಗಗಳಲ್ಲಿರುವಂತಹದ್ದೇ ವಿನ್ಯಾಸವನ್ನು ಹೊಂದಿರುವ ಕಾರಣ ಅವುಗಳು ರಂಗಸ್ಥಳದಲ್ಲಿ ಎಲ್ಲೂ ಆಭಾಸಕರವಾಗಿ ತೋರುವುದಿಲ್ಲ. ಪ್ರಸಂಗದ ಕೇವಲ ಓದಿನ ಮೂಲಕವೂ ಈ ಅಂಶವನ್ನು ದೃಢಪಡಿಸಿಕೊಳ್ಳಲು ಸಾಧ್ಯವಿದೆ.

– ಸದಾಶಿವ. ಕೆ
(ಮುನ್ನುಡಿಯಿಂದ)

Scanned with CamScanner